14	ಹಾಸನ	69	6488	346
15	ಚಿಕ್ಕಮಗಳೂರು	21	2650	113
16	ಕೊಡಗು	31	3700	185
17	ದಕ್ಷಿಣ ಕನ್ನಡ	0	0	0
18	ಉಡುಪಿ	16	2474	120
19	ಬೆಳಗಾಂ	11	3506	72
20	ಚಿಕ್ಕೋಡಿ	0	0	0
21	ಬಿಜಾಪೂರ	26	2842	73
22	ಬಾಗಲಕೋಟೆ	36	8600	218
23	ಧಾರವಾಡ	14	2146	77
24	ಗದಗ	10	1847	74
25	ಹಾವೇರಿ	1	329	8
26	ಉತ್ತರ ಕನ್ನಡ	10	2744	101
27	ಗುಲ್ಬರ್ಗಾ	38	6168	304
28	ಯಾದಗಿರಿ	18	2812	77
29	ಬಳ್ಳಾರಿ	99	17208	917
30	ರಾಯಚೂರು	81	9069	226
31	ಕೊಪ್ಪಳ	31	5667	186
32	ಬೀದರ್	61	6798	261
	ಒಟ್ಟು	2215	308524	11808

45 (95) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) 2006–07ನೇ ಸಾಲಿನಲ್ಲಿ ಎಷ್ಟು ಹೊಸ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿಗೆ ಅನುಮತಿ ನೀಡಲಾಗಿದೆ (ಕ್ಷೇತ್ರವಾರು ವಿವರ ನೀಡುವುದು) ,

ಆ) ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡಲು ಇರುವ ಮಾನದಂಡಗಳೇನು ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 455 ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಹಾಗೂ 200 ಸ್ವತಂತ್ರಸಂಯುಕ್ತ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ ಕ್ಷೇತ್ರವಾರು ಪಟ್ಟಿಯನ್ನು ಲಗತ್ತಿಸಿದೆ

ಆ) ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಇರುವ ಮಾನದಂಡಗಳು

(1) 5 ಕಿ ಮೀ ಅಂತರದಲ್ಲಿ ಯಾವುದೇ ಸರ್ಕಾರಿ ಅಥವಾ ಖಾಸಗಿ ಅನುದಾನಿತ ಪ್ರೌಢಶಾಲೆಗಳು ಇರಬಾರದು

(2) ಕನಿಷ್ಟ 50 ಮಕ್ಕಳು 8ನೇ ತರಗತಿಗೆ ದಾಖಲಾಗುವಂತಿರಬೇಕು

(3) ಶಾಲೆಗೆ ಬೇಕಾದ ಮೂಲ ಭೂತ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಖಾಲಿ ನಿವೇಶನ ಇರಬೇಕು

(4) ಡಾ ನಂಜುಂಡಪ್ಪ ವರದಿಯಂತೆ ಹಿಂದುಳಿದ ತಾಲ್ಲೂಕುಗಳಿಗೆ ಪ್ರಾಧಾನ್ಯತೆ ನೀಡಲಾಗುತ್ತಿದೆ

(5) ಮಾನ್ಯ ಶಾಸಕರು, ಮತ್ತಿತರ ಜನಪ್ರತಿನಿಧಿಗಳ, ಶಿಫಾರಸ್ಸುಗಳನ್ನು ಪರಿಗಣಿಸಲಾಗುತ್ತಿದೆ

ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಇರುವ ಮಾನದಂಡಗಳು

1 5 ಕಿ ಮೀ ವ್ಯಾಪ್ತಿಯಲ್ಲಿ ಯಾವುದೇ ಅನುದಾನಿತ / ಸ ಪ ಪೂ ಕಾಲೇಜುಗಳು ಇರಬಾರದು

2 ಪೂರಕ ಪ್ರೌಢಶಾಲೆಗಳಿರಬೇಕು ಕನಿಷ್ಠ 50 ಮಕ್ಕಳು ಮೊದಲ ವರ್ಷದ ಪದವಿ ಪೂರ್ವ ತರಗತಿಗೆ ದಾಖಲಾಗುವಂತಿರಬೇಕು

3 ಸಂಯುಕ್ತ ಸ ಪ ಪೂ ಕಾಲೇಜಿನ ಮಂಜೂರಾತಿಗೆ ಪ್ರೌಢಶಾಲೆ ಲಭ್ಯವಿರಬೇಕು, ಮೂಲ ಸೌಲಭ್ಯಗಳಿರಬೇಕು

4 ಸ್ವತಂತ್ರ ಸ ಪ ಪೂ ಕಾಲೇಜಿನ ಮಂಜೂರಾತಿಗೆ ಕಟ್ಟಡ ಹಾಗೂ ಮೂಲಭೂತ ಸೌಲಭ್ಯಗಳನ್ನು ತಾತ್ಕಾಲಿಕವಾಗಿ ಒದಗಿಸಬೇಕು

5 ಡಾ ನಂಜುಂಡಪ್ಪ ವರದಿಯಂತೆ ಪ್ರಾಧಾನ್ಯತೆ ನೀಡಲಾಗುತ್ತಿದೆ

6 ಶಾಸಕರು, ಜನ ಪ್ರತಿನಿಧಿಗಳ ಶಿಫಾರಸ್ಸುಗಳನ್ನು ಪರಿಗಣಿಸಲಾಗುತ್ತಿದೆ